ಕಾಪು ಕ್ಷೇತ್ರದ ಕಟಪಾಡಿ, ಇನ್ನಂಜೆ ಬೆಳ್ಳ ಹಾಗೂ ಅದಮಾರುಗಳಿಗೆ ಹೊಸದಾಗಿ ಆರೋಗ್ಯ ಘಟಕ ಮಂಜೂರು ಮಾಡುವ ಬಗ್ಗೆ

೩೬೧. ಶ್ರೀ ವಸಂತ ವಿ. ಸಾಲ್ಯಾನ (ಕಾಪು) ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಪು ಕ್ಷೇತ್ರದ ಕಟಪಾಡಿ ಇನ್ನಂಜೆ ಬೆಳ್ಳ ಹಾಗೂ ಅದಮಾರುಗಳಿಗೆ ಹೊಸದಾಗಿ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದ್ದು ಅದು ಯಾವ ಹಂತದಲ್ಲಿದೆ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಇನ್ನಂಜೆ ಮತ್ತು ಅದಮಾರು ಗ್ರಾಮಗಳಿಗೆ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮಂಜೂರು ಮಾಡುವ ಬಗ್ಗೆ ಯಾವುದೇ ಮನವಿ ಸರ್ಕಾರದ ಮುಂದಿರುವುದಿಲ್ಲ, ಬೆಳ್ಳ ಮತ್ತು ಕಟಪಾಡಿ(ಕೋಟೆ) ಗ್ರಾಮಗಳನ್ನು ಪ್ರಾಥಮಿಕಆರೋಗ್ಯ ಘಟಕಗಳನ್ನು ಮಂಜೂರು ಮಾಡುವ ಪ್ರಸ್ತಾವನೆಗಳು ಪರಿಶೀಲನೆಯಲ್ಲಿವೆ.

ರಾಜ್ಯದಲ್ಲಿ ಮಹಿಳಾ ಪೋಲೀಸರನ್ನು ನೇಮಿಸುವ ಬಗ್ಗೆ

೧೬೪೭. ಶ್ರೀ ಪಿ.ಸಿ. ಮುನಿಸ್ವಾಮಯ್ಯ (ದೇವನಹಳ್ಳಿ) ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಈಗ ಇರುವ ಮಹಿಳಾ ಪೋಲೀಸರ ಸಂಖ್ಯೆ ಎಷ್ಟು?

ಆ) ಈಗಿರುವ ಸಂಖ್ಯೆಯನ್ನು ಹೆಚ್ಚಿಸುವುದು ಸರ್ಕಾರದವರ ಪರಿಶೀಲನೆಯಲ್ಲಿದೆಯೇ, ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಬಿ. ರಾಚಯ್ಯ (ಗೃಹಮಂತ್ರಿಗಳು).—

ಅ) ಮಹಿಳಾ ಪೋಲೀಸರ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

ಮಹಿಳಾ ಆರಕ್ಷಕ ಉಪನಿರೀಕ್ಷಕರು	೨೩
ಮಹಿಳಾ ಮುಖ್ಯ ಪೇದೆಗಳು	೪೭
ಮಹಿಳಾ ಆರಕ್ಷಕ ಪೇದೆಗಳು	೨೪೨

ಆ) ೧೯೮೫–೮೬ನೇ ಸಾಲಿನ ಆರಕ್ಷಕ ಇಲಾಖೆಯ ಪೂರ್ವ ಯೋಜನೆಯಲ್ಲಿ ಮಹಿಳಾ ಪೋಲೀಸ್ ಬಲವನ್ನು ಹೆಚ್ಚಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಗೋಕಾಕ್ ನಗರದಲ್ಲಿ ಹಾಗೂ ಅಂಕಲಗಿಯ ಗ್ರಾಮದಲ್ಲಿ ಆರಕ್ಷಕ ಠಾಣೆಯನ್ನು ತೆರೆಯುವ ಬಗ್ಗೆ

೧೬೨೭. ಶ್ರೀ ಎಂ.ಎಲ್. ಮುನ್ನೋಳವರ್. (ಗೋಕಾಕ್) — ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂ ಜಿಲ್ಲೆಯ ಗೋಕಾಕ್ ನಗರ ಹಾಗೂ ಗ್ರಾಮೀಣ ಸ್ಥಳಗಳಲ್ಲಿ ಇರುವ ಒಟ್ಟಿನ ಆರಕ್ಷಕ ಠಾಣೆಗಳ ಸಂಖ್ಯೆ ಎಷ್ಟು?

ಆ) ಸದರಿ ತಾಲ್ಲೂಕಿನಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಹಾಲಿ ಇರುವ ಆರಕ್ಷಕ ಠಾಣೆಗಳು ಕಡಿಮೆಯಾಗಿರುವುದರಿಂದ ಗೋಕಾಕ್ ನಗರದಲ್ಲಿ ಒಂದು ಹಾಗೂ ಅಂಕಲಗಿ ಗ್ರಾಮದಲ್ಲಿ ಒಂದು ಆರಕ್ಷಕ ಠಾಣೆಯನ್ನು ತೆರೆಯಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಈ) ಮೇಲ್ಕಂಡ ಸ್ಥಳಗಳಲ್ಲಿ ಯಾವಾಗ ಆರಕ್ಷಕ ಠಾಣೆ ತೆರೆಯಲಾಗುವುದು?

ಶ್ರೀ ಬಿ. ರಾಚಯ್ಯ (ಗೃಹಮಂತ್ರಿಗಳು).—

ಅ) ೧. ಪೋಲೀಸ್ ಠಾಣೆಗಳು — ೩

೨. ಹೊರ ಠಾಣೆಗಳು — ೩

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಆಳಂದ್ ತಾಲ್ಲೂಕಿನಲ್ಲಿನ ವೈದ್ಯಕೀಯ ಕೇಂದ್ರಗಳು

೧೫೫೭. ಶ್ರೀ ಶರಣ ಬಸಪ್ಪ ಮಾಲಿ ಪಾಟೀಲ್ (ಆಳಂದ್).— ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ವಿಷಯಗಳಿಗೆ ದಯವಿಟ್ಟು ಉತ್ತರಿಸುವರೇ?

೧. ಆಳಂದ ತಾಲ್ಲೂಕಿನಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ?

೨. ಈ ತಾಲ್ಲೂಕಿನಲ್ಲಿ ಈವರೆಗೆ ಯಾವ ಯಾವ ಕ್ಷೇತ್ರಗಳಲ್ಲಿ ಎಷ್ಟು ಮಂದಿ ಮಹಿಳೆಯರಿಗೆ ಹೆರಿಗೆ ಭತ್ಯವನ್ನು ನೀಡಲಾಗಿದೆ?

೩. ಹೆರಿಗೆ ಭತ್ಯ ನೀಡುವಲ್ಲಿ ವೈದ್ಯಾಧಿಕಾರಿಗಳ ಮೇಲೆ ದೂರುಗಳು ಏನಾದರೂ ಬಂದಿವೆಯೇ?

೪. ಹಾಗಿದ್ದಲ್ಲಿ ಅವರುಗಳ ಹೆಸರುಗಳೇನು? ಹಾಗೂ ಯಾವ ಕೇಂದ್ರಕ್ಕೆ ಸೇರಿದವರು?

೫. ಅವರ ಮೇಲೆ ಕ್ರಮವನ್ನೇನಾದರೂ ಕೈಗೊಳ್ಳಲಾಗಿದೆಯೇ?

೬. ಇಲ್ಲದಿದ್ದರೆ ಸರಕಾರದವರು ಈ ಬಗ್ಗೆ ತನಿಖೆ ನಡೆಸಿ ಕೂಡಲೇ ಕ್ರಮ ಕೈಗೊಳ್ಳುವಿರಾ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು).—

೧. ೨

೨. ಪ್ರಾಥಮಿಕ ಆರೋಗ್ಯ ಕೇಂದ್ರ, ಮಾದನ ಹಿಪ್ಪರಗಾ. — ೧೮೪

ಪ್ರಾಥಮಿಕ ಆರೋಗ್ಯ ಕೇಂದ್ರ, ನರೋಣಾ — ೧೪೩

ಒಟ್ಟು ೩೨೭

೩. ಇಲ್ಲ.

೪. ಉದ್ಭವಿಸುವುದಿಲ್ಲ.

ಧಾರವಾಡದಲ್ಲಿ ರಂಗಮಂದಿರ ಕಟ್ಟುವ ಬಗ್ಗೆ

೧೪೧೧. ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ).— ಮಾನ್ಯ ವಾರ್ತಾ ಯುವಜನ ಸೇವಾ ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲಾ ಸ್ಥಳದಲ್ಲಿ ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಕಟ್ಟಿಸಬೇಕಾದ ರಂಗಮಂದಿರ ಯೋಜನೆ ಯಾವ ಹಂತದಲ್ಲಿದೆ.

ಆ) ವಿಶ್ವ ಕನ್ನಡ ಸಮ್ಮೇಳನ ಆಚರಿಸಲಾಯಿತು. ಆದರೆ, ಈ ರಂಗಮಂದಿರ ಕಟ್ಟಡ ಯಾವಾಗ ಪ್ರಾರಂಭಿಸಲಾಗುವುದು?